# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **689** |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18-08-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 2 ವರ್ಷಗಳಲ್ಲಿ ಎಷ್ಟು ಬಾರಿ ವಿದ್ಯುತ್ ದರ ಪರಿಷ್ಕರಣೆ ಮಾಡಲಾಗಿದೆ; | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಪ್ರತಿ ಆರ್ಥಿಕ ವರ್ಷಕೊಮ್ಮೆ ಅಂದರೆ, 2023-24, 2024-25 ಮತ್ತು 2025-26 ರ ಸಾಲಿನಲ್ಲಿ ವಿದ್ಯುತ್ ದರವನ್ನು ಪರಿಷ್ಕರಣೆ ಮಾಡಿರುತ್ತದೆ. |
| ಆ) | ಪ್ರಸ್ತುತ ದರ ಪ್ರತಿ ಯೂನಿಟ್‌ಗೆ ಎಷ್ಟು; (ವಾಣಿಜ್ಯ ಮತ್ತು ಗೃಹ ಬಳಕೆ ದರಗಳು ಪ್ರತ್ಯೇಕವಾಗಿ ನೀಡುವುದು) | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು 2025-26 ರ ಸಾಲಿಗೆ ನಿಗಧಿಪಡಿಸಿರುವ ವಾಣಿಜ್ಯ ಮತ್ತು ಗೃಹ ಬಳಕೆಯ ವಿದ್ಯುತ್ ದರಗಳ ವಿವರಗಳನ್ನು (ಪ್ರತಿ ಯುನಿಟ್‌ಗೆ) **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| ಇ) | ಗೃಹಜ್ಯೋತಿ ಯೋಜನೆಯಲ್ಲಿ 200 ಯೂನಿಟ್ ಉಚಿತ ವಿದ್ಯುತ್ ಎಂದು ಘೋಷಣೆ ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ; ಈ ಉಚಿತ ವಿದ್ಯುತ್ ಯಾವ ಮಾನದಂಡದಲ್ಲಿ ಎಷ್ಟು ಯೂನಿಟ್ ಉಚಿತ ವಿದ್ಯುತ್ ನೀಡಲಾಗುತ್ತಿದೆ; (ಸಂಪೂರ್ಣ ಮಾಹಿತಿ ನೀಡುವುದು) | "ಗೃಹ ಜ್ಯೋತಿ" ಯೋಜನೆಯಡಿಯಲ್ಲಿ ಮಾಸಿಕ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ಎಂದು ಘೋಷಣೆ ಮಾಡಿರುವುದು ಸರ್ಕಾರದ ಗಮನದಲ್ಲಿದೆ.<br><br>**ಗೃಹ ಜ್ಯೋತಿ ಯೋಜನೆಯ ಅನುಷ್ಠಾನದ ಮಾನದಂಡಗಳು:**<br><br>1. ವಿದ್ಯುತ್ತನ್ನು ಗೃಹ ಬಳಕೆಗೋಸ್ಕರ ಉಪಯೋಗಿಸುತ್ತಿರುವ ಸ್ಥಾವರಗಳಿಗೆ ಮಾತ್ರ ಈ ಯೋಜನೆಯು ಅನ್ವಯಿಸುತ್ತದೆ.<br>2. "ಗೃಹ ಬಳಕೆ ಗ್ರಾಹಕರಿಗೆ ಈ ಯೋಜನೆಯ ಸೌಲಭ್ಯ ಒದಗಿಸುವ ಸಂಬಂಧ ಗ್ರಾಹಕರ 2022-23 ನೇ ಸಾಲಿನ ವಾರ್ಷಿಕ ಬಳಕೆಯ (12 ತಿಂಗಳ) ಸರಾಸರಿ ಯೂನಿಟ್‌ಗಳು + ಶೇ.10 ರಷ್ಟು ಸೇರಿ ಮಾಸಿಕ ಅರ್ಹತಾ ಯೂನಿಟ್‌ಗಳನ್ನು ನಿಗಧಿಪಡಿಸಲಾಗಿದೆ.<br>3. ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಯಡಿಯ ಸ್ಥಾವರಗಳಿಗೆ ಮಾಸಿಕ 58 ಯೂನಿಟ್‌ಗಳನ್ನು ಅರ್ಹತಾ ಯೂನಿಟ್‌ಗಳಾಗಿ ನಿಗಧಿಪಡಿಸಲಾಗಿದೆ.<br>4. ಅಮೃತ ಜ್ಯೋತಿ ಯೋಜನೆಯಡಿಯ ಸ್ಥಾವರಗಳಿಗೆ ಮಾಸಿಕ 83 ಯೂನಿಟ್‌ಗಳನ್ನು ಅರ್ಹತಾ ಯೂನಿಟ್‌ಗಳಾಗಿ ನಿಗಧಿಪಡಿಸಲಾಗಿದೆ.<br>5. ಗೃಹ ಬಳಕೆ ಪ್ರವರ್ಗದ ಗ್ರಾಹಕರಲ್ಲಿ ಮಾಸಿಕ 48 ಯೂನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಸ್ಥಾವರಗಳಿಗೆ 58 ಯೂನಿಟ್‌ಗಳನ್ನು ಅರ್ಹತಾ ಯೂನಿಟ್‌ಗಳಾಗಿ ನಿಗಧಿಪಡಿಸಲಾಗಿದೆ. |

| | | |
|---|---|---|
| | | 6. 2022-23 ರ ಸಾಲಿನ ಪೂರ್ಣ ವಾರ್ಷಿಕ ಬಳಕೆ ಲಭ್ಯವಿಲ್ಲದ ಹಾಗೂ ಸರ್ಕಾರದ ಆದೇಶ ದಿನಾಂಕ: 05.06.2023 ರ ನಂತರ ವಿದ್ಯುತ್ ಸಂಪರ್ಕ ಹೊಂದಿದ ಗೃಹಗಳಿಗೆ ಮಾಸಿಕವಾಗಿ 58 ಯೂನಿಟ್‌ಗಳನ್ನು ಅರ್ಹತಾ ಯೂನಿಟ್‌ಗಳಾಗಿ ನಿಗಧಿಪಡಿಸಲಾಗಿದೆ.<br>7. ಈ ಯೋಜನೆಯಡಿ ಸೌಲಭ್ಯ ಪಡೆಯಲು ಗ್ರಾಹಕರು ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ನೊಂದಾಯಿಸಬೇಕಾಗಿರುತ್ತದೆ.<br>8. ಗೃಹ ವಿದ್ಯುತ್ ಬಳಕೆದಾರರ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಸ್ಥಾವರಗಳಿದ್ದಲ್ಲಿ, ಒಂದು ಸ್ಥಾವರ ಮಾತ್ರ ಈ ಯೋಜನೆಯಡಿಯ ಸೌಲಭ್ಯಕ್ಕೆ ಅರ್ಹವಾಗುತ್ತದೆ. |
| ಈ) | 200 ಯೂನಿಟ್‌ಗಿಂತಲೂ ಹೆಚ್ಚು ವಿದ್ಯುತ್ ಬಳಸಿದ ಗ್ರಾಹಕರಿಗೆ ಈ ಹಿಂದೆ ಬಳಸಲಾದ ಎಲ್ಲಾ ಯೂನಿಟ್‌ಗೂ ಬಿಲ್ಲು ಬರುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ; ಇದ್ದಲ್ಲಿ ಇದನ್ನು ಪರಿಷ್ಕರಿಸಿ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಕೊಟ್ಟು ನಂತರ ಬಳಸಿದ ಯೂನಿಟ್‌ಗಳಿಗೆ ದರ ವಿಧಿಸಿದರೆ ಯೋಜನೆಯ ಉದ್ದೇಶ ಈಡೇರಿದಂತಾಗುವುದರಿಂದ; ಈ ಬಗ್ಗೆ ಸರ್ಕಾರದ ನಿಲುವೇನು? | ಮಾಸಿಕ 200 ಯೂನಿಟ್ ಬಳಕೆ ಮೀರಿದ ಪೂರ್ಣ ವಿದ್ಯುತ್ ಬಿಲ್ಲಿನ ಮೊತ್ತವನ್ನು ಗ್ರಾಹಕರು ಪಾವತಿಸಬೇಕಾಗುತ್ತದೆ.<br><br>200 ಯೂನಿಟ್‌ವರೆಗೆ ಉಚಿತ ವಿದ್ಯುತ್ ನೀಡಿ ನಂತರ ಬಳಸಿದ ಯೂನಿಟ್‌ಗಳಿಗೆ ಮಾತ್ರ ದರ ವಿಧಿಸುವ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಎನರ್ಜಿ 186 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:689ಕ್ಕೆ ಅನುಬಂಧ**

ವಾಣಿಜ್ಯ ಮತ್ತು ಗೃಹ ಬಳಕೆಗೆ ಅನ್ವಯಿಸುವ ಪ್ರತಿ ಯೂನಿಟ್ ನ ದರಗಳ ವಿವರಗಳು:

| ಆರ್ಥಿಕ ವರ್ಷ 2025-2026 | | | |
|---|---|---|---|
| **ಪ್ರವರ್ಗ** | **ಸ್ಥಾಪನದ ಸ್ವರೂಪ** | **ವಿವರಗಳು** | **ದರ/ರೂ.** |
| ಎಲ್.ಟಿ-1 | ಗೃಹ ಬಳಕೆ ದೀಪ/ಗೃಹ ಬಳಕೆ ಸಂಯುಕ್ತ ದೀಪ | ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ | 145 |
| | | ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ, ಸಂಪೂರ್ಣ ಬಳಕೆಗಾಗಿ | 5.80 |
| | | | |
| ಎಲ್.ಟಿ-3(ಎ) | ವಾಣಿಜ್ಯ ದೀಪ, ತಾಪನ ಮತ್ತು ಮೋಟೀವ್ ಪವರ್ ಮತ್ತು ಕ್ಲಿನಿಕ್‌ಗಳು, ಮಾಹಿತಿ ತಂತ್ರಜ್ಞಾನ ಸಂಬಂಧಿತ ಸೇವಾ ಸ್ಥಾಪನಗಳು, ಹಾಗೂ ಹಾಲಿ ವಿದ್ಯುತ್ ದರದಲ್ಲಿನ ಇತರೆ ಸ್ಥಾಪನಗಳು | ನಿಗದಿತ ಶುಲ್ಕ: ಪ್ರತಿ ಸ್ಥಾಪನಕ್ಕೆ, ಪ್ರತಿ ಕಿ.ವಾಟ್‌ಗೆ | 215 |
| | | ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ, ಸಂಪೂರ್ಣ ಬಳಕೆಗಾಗಿ | 7.00 |
| ಗ್ರಾಮೀಣ ಪ್ರದೇಶದ ಗ್ರಾಹಕರಿಗೆ ಬಳಸಿದ ಪ್ರತಿ ಯೂನಿಟ್ಟಿಗೆ 20 ಪೈಸೆಯ ರಿಯಾಯಿತಿಯಿರುತ್ತದೆ. ನಗರ ಅಭಿವೃದ್ಧಿ ಪ್ರಾಧಿಕಾರದಡಿಯಲ್ಲಿ ಬರುವ ಗ್ರಾಮೀಣ ಪಂಚಾಯತ್ ಹೊರತು ಪಡಿಸಿ. | | | |
| | | | |
| ಎಲ್.ಟಿ-3(ಬಿ) | ಜಾಹೀರಾತು ಫಲಕಗಳ ಖಾಯಂವಿದ್ಯುತ್ ಸರಬರಾಜು ಮತ್ತು ತಾತ್ಕಾಲಿಕ ವಿದ್ಯುತ್ ಸರಬರಾಜು | ನಿಗದಿತ ಶುಲ್ಕ: 67 ಹೆಚ್.ಪಿ ಗಿಂತ ಕಡಿಮೆಗೆ ಮಾತ್ರ | 200.00 |
| | | ವಿದ್ಯುತ್ ಬಳಕೆ ಶುಲ್ಕ: ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ, ಸಂಪೂರ್ಣ ಬಳಕೆಗಾಗಿ | 9.50 |
| | | | |
| ಹೆಚ್.ಟಿ-2(ಬಿ): | ವಾಣಿಜ್ಯ ಸ್ಥಾಪನಗಳು, ಹೋಟೆಲ್‌ಗಳು, ಬ್ಯಾಂಕುಗಳು, ಮಾಹಿತಿ ತಂತ್ರಜ್ಞಾನ ಸೇವಾ ಸಂಸ್ಥೆಗಳು, ಪೆಟ್ರೋಲ್/ ಡೀಸೆಲ್ ಶೇಖರಣ ಸ್ಥಾವರಗಳು | ಬಿಲ್ಲಿಂಗ್ ಡಿಮ್ಯಾಂಡಿನ ಪ್ರತಿ ಕೆವಿಎಗೆ, ಪ್ರತಿ ತಿಂಗಳಿಗೆ ಬೇಡಿಕೆ ಶುಲ್ಕ | 370 |
| | | ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ವಿದ್ಯುತ್ತಿನ ಪ್ರತಿ ಯೂನಿಟ್ಟಿಗೆ | 5.95 |
| | | | |
| ಹೆಚ್.ಟಿ-4 | ಸ್ವತಂತ್ರವಾಗಿ ವಿದ್ಯುತ್ ಪಡೆಯುತ್ತಿರುವ ನಿವಾಸಿ ಅಪಾರ್ಟ್ಮೆಂಟುಗಳು, ಕಾಲೋನಿಗಳು. | ಡಿಮ್ಯಾಂಡ್ ಶುಲ್ಕ: ಪ್ರತಿ ತಿಂಗಳಿಗೆ ಪ್ರತಿ ಕೆವಿಎಗೆ | 290 |
| | | ವಿದ್ಯುತ್ ಬಳಕೆ ಶುಲ್ಕ : ಆ ತಿಂಗಳಲ್ಲಿ ಬಳಸಿದ ಎಲ್ಲಾ ಯೂನಿಟ್ಟುಗಳಿಗೆ, ಪ್ರತಿ ಯೂನಿಟ್ಟಿಗೆ | 6.90 |